ಅವರು ಇಂಗ್ಲೆಂಡಿನ ಮೇಲ್ವರ್ಗದ ವ್ಯಕ್ತಿಯನ್ನು ಅನುಕರಿಸುವುದನ್ನು ನೋಡಲು ಇಷ್ಟಪಡುತ್ತೇನೆ. ಅಲ್ಲಿ ಕಾರ್ಮಿಕ ವರ್ಗವು ಮೇಲ್ವರ್ಗವನ್ನು ಅಭ್ಯಸಿಸಬೇಕಾಗುತ್ತದೆ. ಕಪ್ಪು ಅಮೆರಿಕನ್ನರು ಬಿಳಿ ಅಮೆರಿಕನ್ನರನ್ನು ಅಭ್ಯಸಿಸಬೇಕಾಗುತ್ತದೆ. ಶತಮಾನಗಳವರೆಗೆ ಗುಲಾಮಗಿರಿಯಲ್ಲಿದ್ದ ಕಪ್ಪುಜನರಿಗೆ ಬಿಳಿಯನೊಬ್ಬನ ಮುಖದ ಮೇಲೆ ನಗು ಸುಳಿದರೆ ಇಲ್ಲವೆ ಬಿಳಿಯಳೊಬ್ಬಳನ್ನು ಮುಟ್ಟಿದರೆ ಕಪ್ಪು ವ್ಯಕ್ತಿಗೆ ತಾನು ಮಾರಾಟವಾಗುತ್ತೇನೆ ಇಲ್ಲವೆ ಹೊಡೆತ ತಿನ್ನಬೇಕಾಗುತ್ತದೆ ಎನ್ನುವುದು ಗೊತ್ತು. ನಾವು ಬಿಳಿಯ ಅಮೆರಿಕನ್ನರ ಬಗ್ಗೆ ಓದಬೇಕು. ಆದರೆ, ಅವರಿಗೆ ನಮ್ಮ ಬಗ್ಗೆ ಓದುವ ಅವಶ್ಯಕತೆಯಿಲ್ಲ. ಹಾಗಾಗಿ ಅದು ಲೇಖಕ ಕರಿಕನ್ನಡಕದ ಮೂಲಕ ನೋಡಿದಂತಿರುತ್ತದೆ. ಈ ರೀತಿಯ ನೋಟ ಕಂಡಾಗ ದುಃಖವಾಗುತ್ತದೆ.

◆ **ಹಾಗಾದರೆ ನಿಮ್ಮ ಆಯ್ಕೆಯ ಲೇಖಕರು...**

ಎಡ್ನಾ ಸೇಂಟ್ ವಿನ್ಸೆಂಟ್ ಮಿಲ್ಲೆ ನನಗೆ ಇಷ್ಟವಾಗುತ್ತಾಳೆ. ಆಕೆ ತನ್ನ ಮನದಾಳದ ಮಾತುಗಳನ್ನು ಹೇಳುತ್ತಾಳೆ. ಆಕೆ ಕಪ್ಪು ಇಲ್ಲವೆ ಏಷ್ಯಾದ ಜನರನ್ನು ನೋಡುವ ರೀತಿಯನ್ನು ಆಕೆಯ ಕಣ್ಣುಗಳ ಮೂಲಕ ನೋಡಿದಾಗ ಖುಷಿಯಾಗುತ್ತದೆ. ಆದರೆ, ಬಹಳಷ್ಟು ಲೇಖಕರನ್ನು ನೋಡಿದಾಗ ನಿರಾಶೆಯಾಗುತ್ತದೆ.

◆ **ಬರವಣಿಗೆಯಲ್ಲಿ ನಿಮ್ಮ ಅತ್ಯುತ್ತಮ ಅನುಭವ ಯಾವುದು?**

ಭಾಷೆ ತಾನಾಗಿ ಒಲಿದು ಬಂದು 'ಮುದ್ದು ನಾನು ಸಂಪೂರ್ಣವಾಗಿ ನಿನ್ನ ವಶ' ಅನ್ನುವುದು ಅತ್ಯುತ್ತಮ ಅನುಭವ.


**ಜಾರ್ಜ್ ಪ್ಲಿಂಪ್ಟನ್**

ಅಮೆರಿಕದ ಪತ್ರಕರ್ತ, ಬರಹಗಾರ. ತಮ್ಮ ಕ್ರೀಡಾಬರಹಗಳಿಗೆ ಹೆಚ್ಚು ಪ್ರಸಿದ್ಧರಾಗಿದ್ದರು. 'ದ ಪ್ಯಾರಿಸ್ ರಿವ್ಯೂ' ಪತ್ರಿಕೆಯ ಮೊದಲ ಸಂಪಾದಕರಾಗಿ ಅದರ ಬೆಳವಣಿಗೆಯಲ್ಲಿ ಮಹತ್ವದ ಪಾತ್ರ ವಹಿಸಿದ್ದಾರೆ. ನಟನೆಯಲ್ಲಿ ಕೂಡ ಆಸಕ್ತಿ ಹೊಂದಿದ್ದರು. ಹಲವು ಸಿನಿಮಾಗಳಲ್ಲಿ ಕೂಡ ಅಭಿನಯಿಸಿದ್ದಾರೆ.

**ಹೇಮಾ ಎಸ್.**

ಕನ್ನಡದಲ್ಲಿ ಎಂ.ಎ. ಹಾಗೂ ಪಿಎಚ್.ಡಿ. ಪದವೀಧರೆ. ಕನ್ನಡ ಉಪನ್ಯಾಸಕಿಯಾಗಿ ಕೆಲಸ ಮಾಡಿದ್ದಾರೆ. ಆಕಾಶವಾಣಿಯಲ್ಲಿ ಕೆಲವು ಕಾಲ ಉದ್ಘೋಷಕಿಯಾಗಿ ಕಾರ್ಯನಿರ್ವಹಿಸಿದ್ದಾರೆ. ಇಂಗ್ಲಿಷ್ ಹಾಗೂ ಹಿಂದಿಯಿಂದ ಲೇಖನ, ಕತೆ ಹಾಗೂ ಕವನಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಸಾಹಿತ್ಯ ಓದು ಹಾಗೂ ಅನುವಾದ ಹವ್ಯಾಸಗಳು. ಪ್ರಕಟಿತ ಕೃತಿಗಳು: 'ಹೆಸರಿಲ್ಲದ ಹೂ' (ಅಬ್ಬಾಸ್ ಕಿರಸ್ತೊಮಿ ಕವನಗಳ ಅನುವಾದ) ಮತ್ತು 'ಉರಿವ ಬನದ ಕೋಗಿಲೆಗಳು' (ಅನುವಾದಿತ ಲೇಖನಗಳ ಸಂಗ್ರಹ). ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.